ಜಿಲ್ಲೆ ನೀರಾವರಿ ಯೋಜನೆಗೆ ಕಾಯಕಲ್ಪ ಒದಗಿಸಿ

ಸಂಸದ ರಾಘವೇಂದ್ರ ಆಗ್ರಹ | ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಭೇಟಿ ಮಾಡಿ ಮನವಿ | ಶೀಘ್ರ ಕ್ರಮದ ಭರವಸೆ

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಕೃಷಿಗೆ ಉತ್ತೇಜನ ಮತ್ತು ರೈತರಿಗೆ ಸಮರ್ಪಕ ನೀರಾವರಿ ಲಭ್ಯವಾಗುವ ನಿಟ್ಟಿನಲ್ಲಿ ಹಾಗೂ ಮಳೆಗಾಲಕ್ಕೂ ಮುನ್ನ ಜಿಲ್ಲೆಯ ಪ್ರಮುಖ ಕೆರೆಗಳಿಗೆ ಅಗತ್ಯ ಕಾಯಕಲ್ಪ ಒದಗಿಸುವಂತೆ ಕೋರಿ ಸಂಸದ ಬಿ.ವೈ.ರಾಘವೇಂದ್ರ ಅವರು ಬೆಂಗಳೂರಿನಲ್ಲಿ ಜಲಸಂಪನ್ಮೂಲ ಸಚಿವರಾದ ರಾಮಲಿಂಗಾರೆಡ್ಡಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ.

ಜಿಲ್ಲೆಯ ತುಂಗಾ ಮೇಲ್ದಂಡೆ ಯೋಜನೆ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಆಧುನೀಕರಣ ಯೋಜನೆಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಕ್ಷೇತ್ರದ ರೈತರ ಜೀವನಾಡಿಯಂತಿರುವ ಪ್ರಮುಖ ಹಾಯ್‌ಹೊಳೆ, ಬಾರೆಹಳ್ಳ (ಪುರದಾಳ್) ಮತ್ತು ಗೌಡನಕೆರೆಗಳ ಕೆರೆಗಳ ಕಾಲುವೆ ಆಧುನೀಕರಣ ಸೇರಿದಂತೆ ವಿವಿಧ ನೀರಾವರಿ ಯೋಜನೆಗಳಿಗೆ ಕಾಯಕಲ್ಪ ಒದಗಿಸಲು ಅಗತ್ಯ ಅನುದಾನವನ್ನು ತುರ್ತಾಗಿ ಬಿಡುಗಡೆಗೊಳಿಸಿ, ಕಾಮಗಾರಿಗಳನ್ನು ಆದಷ್ಟು ಶೀಘ್ರದಲ್ಲಿ ಪೂರ್ಣಗೊಳಿಸುವಂತೆ ಈ ಸಂದರ್ಭದಲ್ಲಿ ಅವರು ಸಚಿವರಿಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದ್ದಾರೆ.

ವಾರ್ಷಿಕ ದುರಸ್ತಿ ಇಲ್ಲದೆ ಮಣ್ಣಿನ ಕಾಲುವೆಗಳು ಹೂಳು ತುಂಬಿ ಹೋಗಿರುವುದರಿಂದ, ನೀರು ಕಾಲುವೆಯ ಕೊನೆಯ ಭಾಗದ ರೈತರಿಗೆ ತಲುಪುತ್ತಿಲ್ಲ. ಈ ಪ್ರಮುಖ ಮೂರು ಕೆರೆಗಳ ವ್ಯಾಪ್ತಿಯ ನಾಲಾ ಜಾಲದ ಅಭಿವೃದ್ಧಿ ಹಾಗೂ ಆಧುನೀಕರಣಕ್ಕಾಗಿ ಸುಮಾರು 80 ಕೋಟಿ ರೂ. ಮತ್ತು ಐತಿಹಾಸಿಕ ಪುಣ್ಯಕ್ಷೇತ್ರ ಕೂಡ್ಲಿ ಹಾಗೂ ಹೊಳೆಬೆನವಳ್ಳಿ ಗ್ರಾಮದ ಬಳಿ ಪ್ರವಾಹ ನಿಯಂತ್ರಣಕ್ಕಾಗಿ ತುಂಗಾ ನದಿಗೆ ತಡೆಗೋಡೆ ನಿರ್ಮಿಸಲು 20 ಕೋಟಿ ರು. ಸೇರಿದಂತೆ ಒಟ್ಟು ಸುಮಾರು 100 ಕೋಟಿ ರು. ಮೊತ್ತದ ಕಾಮಗಾರಿಗಳ ಆಡಳಿತಾತ್ಮಕ ಅನುಮೋದನೆಯ ಪ್ರಸ್ತಾವನೆಗೆ ತಕ್ಷಣವೇ ಅನುಮೋದನೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಜಿಲ್ಲೆಯ ಏತ ನೀರಾವರಿ ಯೋಜನೆಗಳ ವಿದ್ಯುತ್ ಸಂಪರ್ಕ ಕಡಿತಕ್ಕೆ ಸಂಸದ ಬಿ.ವೈ.ರಾಘವೇಂದ್ರ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಬಾಕಿ ಬಿಲ್ ಪಾವತಿಗೆ ಅನುದಾನ ಬಿಡುಗಡೆ ಮಾಡಲು ಸಚಿವರಿಗೆ ಒತ್ತಾಯಿಸಿದರು. ಜಿಲ್ಲೆಯಲ್ಲಿ ನಿರೀಕ್ಷಿತ ಮಳೆಯಾಗದೆ ನೀರಿನ ಮಟ್ಟ ಕುಸಿದಿರುವ ಈ ಸಂದರ್ಭದಲ್ಲಿ, ಕೆರೆ-ಕಟ್ಟೆಗಳಿಗೆ ನೀರು ತುಂಬಿಸುವ ಕಾರ್ಯ ಸ್ಥಗಿತಗೊಳ್ಳದಂತೆ ತಡೆಯಲು ಮನವಿ ಸಲ್ಲಿಸಿರುವ ಸಂಸದ ಬಿ.ವೈ.ರಾಘವೇಂದ್ರ, ಕ್ಷೇತ್ರ ವ್ಯಾಪ್ತಿಯ ಸಣ್ಣ ಮತ್ತು ಬೃಹತ್ ಏತ ನೀರಾವರಿ ಯೋಜನೆಗಳ ವಿದ್ಯುತ್ ಬಿಲ್ ಬಾಕಿ ನೆಪದಲ್ಲಿ ಮೆಸ್ಕಾಂ ಇಲಾಖೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುವುದನ್ನು ಸಚಿವರ ಗಮನಕ್ಕೆ ತಂದರು.

ಶಿಕಾರಿಪುರದ ಉಡುಗಣಿ - ತಾಳಗುಂದ - ಹೊಸೂರು, ಕಸಬಾ ಮತ್ತು ಸನ್ಯಾಸಿಕೊಪ್ಪ ಯೋಜನೆಗಳು ಹಾಗೂ ಸೊರಬ ತಾಲೂಕಿನ ಮೂಡಿ, ಮೂಗೂರು ಮತ್ತು ಕಚವಿ ಏತ ನೀರಾವರಿ ಯೋಜನೆಗಳು ಸೇರಿದಂತೆ ಒಟ್ಟು 8 ಪ್ರಮುಖ ಯೋಜನೆಗಳ ಒಟ್ಟು ಸುಮಾರು 62.56 ಕೋಟಿ ರು. ಬಾಕಿ ವಿದ್ಯುತ್ ಬಿಲ್ ಪಾವತಿಸಲು ಆಗ್ರಹಿಸಿದರು.

ಇದೇ ಸಂದರ್ಭದಲ್ಲಿ ಸಂಸದ ರಾಘವೇಂದ್ರ, ಶಿವಮೊಗ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಉಡುಪಿ ಜಿಲ್ಲೆಯ ಬೈಂದೂರು ವಿಧಾನಸಭಾ ಕ್ಷೇತ್ರದ ಸಿದ್ದಾಪುರ ಏತ ನೀರಾವರಿ ಯೋಜನೆ ತಡೆಹಿಡಿದಿರುವನ್ನು ತೆರವುಗೊಳಿಸಿ, ಕಾಮಗಾರಿ ಮುಂದುವರಿಸುವಂತೆಯೂ ಪ್ರತ್ಯೇಕವಾಗಿ ಸಚಿವರ ಗಮನ ಸೆಳೆದರು.

ಈ ಮಹತ್ವಾಕಾಂಕ್ಷಿ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ಸಂಸದ ಬಿ.ವೈ.ರಾಘವೇಂದ್ರ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಟ್ಟದಲ್ಲಿ ನಿರಂತರವಾಗಿ ನಡೆಸುತ್ತಾ ಪ್ರಯತ್ನಗಳನ್ನು ನಡೆಸಿಕೊಂಡೆ ಬಂದಿದ್ದಾರೆ. ಈ ಹಿಂದೆ 2024ರ ಅಕ್ಟೋಬರ್‌ನಲ್ಲಿ ಕೇಂದ್ರದ ಜಲಶಕ್ತಿ ಸಚಿವ ವಿ. ಸೋಮಣ್ಣನವರಿಗೆ ಪತ್ರ ಬರೆದು ಈ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಬಿಡುಗಡೆ ಮಾಡಲು ಸಂಸದರು ಕೋರಿದ್ದರು. ಸಂಸದರ ಪ್ರಯತ್ನಗಳಿಗೆ ಸ್ಪಂದಿಸಿದ್ದ ಕೇಂದ್ರ ಸಚಿವರು ಜಲಶಕ್ತಿ ಇಲಾಖೆಯ ಜಂಟಿ ಆಯುಕ್ತರಿಗೆ ಸೂಕ್ತ ಕ್ರಮಕ್ಕಾಗಿ ನಿರ್ದೇಶಿಸಿದ್ದರು. ಸಂಸದರ ಅವಿರತ ಪ್ರಯತ್ನಗಳಿಂದಾಗಿ ಪ್ರಸ್ತಾವನೆ ಅಂತಿಮ ಹಂತಕ್ಕೆ ಬಂದಿದ್ದು 100 ಕೋಟಿ ರು. ಮಾನ್ಯ ಜಲಸಮನ್ಮೂಲ ಸಚಿವರ ಮಂಜೂರಾತಿ ದೊರೆತ ಕೂಡಲೇ ಕಾಮಗಾರಿ ಪ್ರಾರಂಭಗೊಳ್ಳಲಿದೆ.

ಸಂಸದರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ, ಶಿವಮೊಗ್ಗ ಜಿಲ್ಲೆಯ ರೈತರ ನೀರಾವರಿ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದ್ದಾರೆ. ಅನುದಾನ ಬಿಡುಗಡೆಗೆ ಅಧಿಕಾರಿಗಳಿಗೆ ಆದಷ್ಟು ಬೇಗ ನಿರ್ದೇಶನ ನೀಡುವುದಾಗಿ ಸಚಿವರು ಸಂಸದರ ಕೋರಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಸುದ್ದಿ ಸಿಂಚನ

ಆಗುಂಬೆಯಲ್ಲಿ ಇನೋವಾ ಕಾರಲ್ಲಿ ಗೋವು ಅಪಹರಣ

ತೀರ್ಥಹಳ್ಳಿ: ಆಗುಂಬೆ ಹೋಬಳಿಯ ಹೊನ್ನೇತಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಡಿಕೋಡು ಭಾಗದಲ್ಲಿ ಬೆಳಗಿನ ಜಾವ ಸುಮಾರು 3 ಗಂಟೆ ವೇಳೆಗೆ ಗೋವುಗಳ ಕಳ್ಳವು ಘಟನೆ ನಡೆದಿದೆ. ಇನೋವಾ ಕಾರಿನಲ್ಲಿ ಬಂದಿದ್ದ ಕಳ್ಳರು ಸ್ಥಳೀಯರ ಮೂರ್ನಾಲ್ಕು ಜಾನುವಾರುಗಳನ್ನು ವಾಹನದಲ್ಲಿ ತುಂಬಿ ಕೊಂಡು ಪರಾರಿಯಾಗಿದ್ದಾರೆ. ಅನುಮಾನಾಸ್ಪದವಾಗಿ ಸಂಚರಿಸುತ್ತಿದ್ದ ವಾಹನವನ್ನು ಗಮನಿಸಿದ ಸ್ಥಳೀಯ ಯುವಕರು ಕೂಡಲೇ ಬೆನ್ನಟ್ಟಿದ್ದಾರೆ. ಆದರೆ, ಇನೋವಾ ಕಾರಿನಲ್ಲಿದ್ದ ದುರುಳರು ವೇಗವಾಗಿ ಕಾರು ಚಲಾಯಿಸಿ, ಯುವಕರ ಕಣ್ತುತಪ್ಪಿಸಿ ದನಗಳನ್ನು ಅಪಹರಿಸಿದ್ದಾರೆ. ಕಾರಿನ ನಂಬರ್‌ವಿಡಿಯೋದಲ್ಲಿ ಸೆರೆಯಾಗಿದ್ದು, ಕೂಡಲೇ ಆರೋಪಿಗಳನ್ನು ಬಂಧಿಸಿ ಕಳುವಾದ ಜಾನುವಾರು ಗಳನ್ನು ಪತ್ತೆ ಹಚ್ಚುವಂತೆ ಸ್ಥಳೀಯರು ಆಗುಂಬೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಶಿವನಗೌಡ ಅವರಿಗೆ ಆಗ್ರಹಿಸಿದ್ದಾರೆ.

ಕಾಡುಹಂದಿ ಬೇಟೆ: ಆರೋಪಿಗೆ ನ್ಯಾಯಾಂಗ ಬಂಧನ-ಕತ್ತಿ, ತಕ್ಕಡಿ ವಶ

ಶಿಕಾರಿಪುರ: ತಾಲೂಕಿನ ಗಾಮ ಗ್ರಾಮದಲ್ಲಿ ಕಾಡು ಹಂದಿಯನ್ನು ಬೇಟೆಯಾಡಿ, ಮನೆಯಲ್ಲಿ ಮಾಂಸ ಮಾರಾಟಕ್ಕೆ ಸಿದ್ಧತೆ ನಡೆಸುತ್ತಿದ್ದ ವ್ಯಕ್ತಿಯನ್ನು ಅಂಬ್ಲಿಗೊಳ್ಳ ಉಪವಿಭಾಗದ ವಲಯ ಅರಣ್ಯ ಅಧಿಕಾರಿಗಳು ದಾಳಿ ನಡೆಸಿ ಬಂಧಿಸಿದ್ದಾರೆ. ಗಾಮ ಗ್ರಾಮದ ನಿವಾಸಿ ಗಾಳಿ ಕುಮಾರ ಬಂಧಿತ ಆರೋಪಿಯಾಗಿದ್ದು, ಈತನಿಂದ 27 ಕೆ.ಜಿ. ಕಾಡುಹಂದಿಯ ಮಾಂಸ ಹಾಗೂ ಕೃತ್ಯಕ್ಕೆ ಬಳಸಿದ್ದ ಕತ್ತಿ, ಮಚ್ಚು ಮತ್ತು ತಕ್ಕಡಿಯನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ವಲಯ ಅರಣ್ಯಾಧಿಕಾರಿ ಶಾಂತಪ್ಪ ಪೂಜಾರ್‌ನೇತೃತ್ವದಲ್ಲಿ, ಉಪ ವಲಯ ಅರಣ್ಯಾಧಿಕಾರಿ ಅಬ್ದುಲ್ ಕರೀಮ್, ಅಮಿತ್ ಹಾಗೂ ಗಸ್ತು ಅರಣ್ಯ ಪಾಲಕ ಕೃಷ್ಣಮೂರ್ತಿ, ಸುರೇಶ್ ಮತ್ತು ಚಂದ್ರಪ್ಪ ಲಮಾಣಿ ತಂಡ ಕಾರ್ಯಾಚರಣೆಯಲ್ಲಿ ಭಾಗವಹಿಸಿತ್ತು. ಅರಣ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಶೋಧನಾ ಸಮಿತಿಯಿಂದ ಹಿಂದೆ ಸರಿಯಲು ಮನವಿ

ಸುರೇಶ್, ರಾಜೇಂದ್ರಗೆ ಕೃಷಿ ವಿವಿ ನಿವೃತ್ತ ಅಧ್ಯಾಪಕರು, ಹಳೆ ವಿದ್ಯಾರ್ಥಿಗಳ ವೇದಿಕೆ ಬಹಿರಂಗ ಪತ್ರ

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

- ನಿಷ್ಪಕ್ಷಪಾತ ಮತ್ತು ಸ್ವತಂತ್ರವಾದ ಶೋಧನಾ ಸಮಿತಿ ರಚನೆಯಾಗಿಲ್ಲ
- ರಾಜ್ಯಪಾಲರು, ಕರ್ನಾಟಕ ಸರ್ಕಾರ, ಲೋಕಾಯುಕ್ತರಿಗೆ ಮನವಿ
- ಆಯ್ಕೆ ಪ್ರಕ್ರಿಯೆ ಆತಂಕ ಬಗ್ಗೆ ಹಲವು ಗಣ್ಯರ ಬೆಂಬಲ

ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ ಹಾಗೂ ಧಾರವಾಡ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳ ಉಪಕುಲಪತಿ ಆಯ್ಕೆಗಾಗಿ ರಚಿಸಲಾದ ಶೋಧನಾ ಸಮಿತಿಯಿಂದ ಸ್ವಯಂ ಹಿಂದೆ ಸರಿಯುವಂತೆ ಶೋಧನಾ ಸಮಿತಿಯ ಅಧ್ಯಕ್ಷರಾಗಿರುವ ಎಸ್.ವಿ.ಸುರೇಶ್, ರಾಜೇಂದ್ರ ಪ್ರಸಾದ್ ಅವರಿಗೆ ಕೃಷಿ ಮತ್ತು ಸಂಬಂಧಿತ ವಿಶ್ವವಿದ್ಯಾಲಯಗಳ ನಿವೃತ್ತ ಅಧ್ಯಾಪಕರು, ವಿಜ್ಞಾನಿಗಳು ಹಾಗೂ ಹಳೆ ವಿದ್ಯಾರ್ಥಿಗಳ ವೇದಿಕೆಯು ಬಹಿರಂಗ ಪತ್ರದ ಮೂಲಕ ಮನವಿ ಮಾಡಿದೆ.

ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ ಹಾಗೂ ಧಾರವಾಡ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳ ಉಪಕುಲಪತಿ ಆಯ್ಕೆಗಾಗಿ ರಚಿಸಲಾದ ಶೋಧನಾ ಸಮಿತಿಗಳು ನಿಷ್ಪಕ್ಷಪಾತ ಮತ್ತು ಸ್ವತಂತ್ರವಾದ ಶೋಧನಾ ಸಮಿತಿ ರಚನೆಯಾಗಿಲ್ಲ. ಈ ಸಂಬಂಧ ಮಾನ್ಯ ರಾಜ್ಯಪಾಲರು, ಕರ್ನಾಟಕ ಸರ್ಕಾರ, ಲೋಕಾಯುಕ್ತ ಹಾಗೂ ಇತರ ಸಂಬಂಧಿತ ಅಧಿಕಾರಿಗಳಿಗೆ ಮನವಿಗಳನ್ನು ಸಲ್ಲಿಸಿರುವುದಲ್ಲದೆ, ವ್ಯಾಪಕ ಮಾಧ್ಯಮಗಳ ಮೂಲಕವೂ ಶೋಧನಾ ಸಮಿತಿಗಳ ರಚನೆ ಕುರಿತು ಆತಂಕಗಳನ್ನು ವೇದಿಕೆ ವ್ಯಕ್ತಪಡಿಸಿದೆ.

ಈ ಆತಂಕಗಳಿಗೆ ಮಾಜಿ ಸಚಿವರು ಹಾಗೂ ಹಿರಿಯ ರೈತ ಮುಖಂಡರಾದ ಕಾಗೋಡು ತಿಮ್ಮಪ್ಪ ಸೇರಿದಂತೆ ಹಲವಾರು ಶಿಕ್ಷಣ ತಜ್ಞರು ಮತ್ತು ಸಾರ್ವಜನಿಕರೂ ಧ್ವನಿಗೂಡಿಸಿದ್ದು, ಆಯ್ಕೆ ಪ್ರಕ್ರಿಯೆಯು ವ್ಯಾಪಕ ಸಾರ್ವಜನಿಕ ಪರಿಶೀಲನೆಗೆ ಒಳಗಾಗಿದೆ.

ಆದಾಗ್ಯೂ, ಈ ಎಲ್ಲ ಮನವಿಗಳು ಮತ್ತು ಶೋಧನಾ ಸಮಿತಿಗಳ ಕುರಿತ ಬಗೆಹರಿಯದ ಪ್ರಶ್ನೆಗಳ ನಡುವೆಯೂ, ಉಪಕುಲಪತಿಗಳ ಆಯ್ಕೆ ಪ್ರಕ್ರಿಯೆಯನ್ನು ನಿಗದಿತ ವೇಳಾಪಟ್ಟಿಯಂತೆ ಮುಂದುವರಿಸಲು ಉದ್ದೇಶಿಸಲಾಗಿದ್ದು, ಜುಲೈ 3 ಮತ್ತು 4ರಂದು ಸಭೆಗಳನ್ನು ನಡೆಸಲು ನಿಗದಿಪಡಿಸಲಾಗಿದೆ ಎಂಬ ಮಾಹಿತಿ ನಮಗೆ ಲಭ್ಯವಾಗಿದೆ. ಈ ಹಿನ್ನೆಲೆಯಲ್ಲಿ ತಮಗಿಬ್ಬರಿಗೂ ಈ ಪ್ರಾಮಾಣಿಕ ಮನವಿಯನ್ನು ಸಲ್ಲಿಸುವ ಅಗತ್ಯ ಉಂಟಾಗಿದೆ.

ಈ ಹಿನ್ನೆಲೆಯಲ್ಲಿ, ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿರುವ ಆತಂಕಗಳಿಗೆ ಸಮರ್ಪಕ ಪರಿಹಾರ ದೊರೆಯುವವರೆಗೆ, ತಮಗೆ ವಹಿಸಲಾಗಿರುವ ಶೋಧನಾ ಸಮಿತಿಗಳ ಕಾರ್ಯದಿಂದ ಸ್ವಯಂ ಪ್ರೇರಿತವಾಗಿ ಹಿಂದೆ ಸರಿಯುವಂತೆ ನಾವು ಗೌರವಪೂರ್ವಕವಾಗಿ ತಮಗಿಬ್ಬರಿಗೂ ಮನವಿ ಮಾಡುತ್ತೇವೆ. ಇಂತಹ ನಿರ್ಧಾರವು ತಪ್ಪಿನ ಒಪ್ಪಿಗೆಯಾಗುವುದಿಲ್ಲ; ಬದಲಾಗಿ ಕರ್ನಾಟಕದ ವಿಶ್ವವಿದ್ಯಾಲಯಗಳ ಹಿತಾಸಕ್ತಿಯನ್ನು ಸರ್ವೋನ್ನತವಾಗಿ ಪರಿಗಣಿಸುವ ಶೈಕ್ಷಣಿಕ ಮುತ್ಸದ್ದಿತನ ಹಾಗೂ ಸಾಂಸ್ಥಿಕ ಹೊಣೆಗಾರಿಕೆಯ ಪ್ರತೀಕವಾಗಿದೆ.

ಆದ್ದರಿಂದ, ನಮ್ಮ ವಿಶ್ವವಿದ್ಯಾಲಯಗಳ ಘನತೆಯನ್ನು ಕಾಪಾಡಲು, ಶೈಕ್ಷಣಿಕ ಸಂಸ್ಥೆಗಳ ಮೇಲಿನ ಸಾರ್ವಜನಿಕ ವಿಶ್ವಾಸವನ್ನು ಉಳಿಸಿಕೊಳ್ಳಲು ಹಾಗೂ ಉಪಕುಲಪತಿ ಆಯ್ಕೆ ಪ್ರಕ್ರಿಯೆಯು ಯಾವುದೇ ಅನುಮಾನಕ್ಕೂ ಅವಕಾಶವಿಲ್ಲದಂತೆ ಶೋಧನಾ ಸಮಿತಿಯಿಂದ ಸ್ವಯಂ ಹಿಂದೆ ಸರಿಯುವಂತೆ ವೇದಿಕೆಯು ಮನವಿ ಮಾಡಿದೆ.

ಶಿವ ಮಕ್ಕಳ ಆಸ್ಪತ್ರೆಗೆ ಡಾ.ಮಹಾಂತ ಶ್ರೀ, ಶಿವಾನಂದ ಶ್ರೀಗಳಿಂದ ಚಾಲನೆ

ಆನವಟ್ಟಿ: ಬಹು ವರ್ಷದಿಂದ ಹುಟ್ಟಿದ ಮಗುವಿಗೆ ಬರುವ ಕಾಯಿಲೆಗಳ ನಿವಾರಣೆಗಾಗಿ ಕಷ್ಟಪಡಬೇಕಾದ ಕಷ್ಟ ದಿನಗಳು ದೂರಾಗುತ್ತಿವೆ. ಅಮ್ಮಂದಿರ ಈ ಕಷ್ಟ ದೂರ ಮಾಡಲು ಶಿವ ಮಕ್ಕಳ ಆಸ್ಪತ್ರೆ ಆನವಟ್ಟಿಯಲ್ಲಿ ತೆರೆಯುತ್ತಿರುವುದು ಸಂತಸ ವಿಷಯ. ಮಕ್ಕಳ ಆಸ್ಪತ್ರೆ ಸೇವೆಯನ್ನು ಜನರು ಸದ್ಬಳಕೆ ಮಾಡಿಕೊಳ್ಳಿ ಎಂದು ಜಡೆ ಮಠದ ಡಾ. ಮಹಾಂತ ಸ್ವಾಮೀಜಿ ಹಾಗೂ ಶಾಂತಪುರ ಮಠದ ಶಿವಾನಂದ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಸೊರಬ ರಸ್ತೆಯ ಪೊಲೀಸ್ ಠಾಣೆ ಎದುರು ನೂತನ ಶಿವ ಮಕ್ಕಳ ಆಸ್ಪತ್ರೆಯನ್ನು ಈಚೇಗೆ ಉದ್ಘಾಟಿಸಿ ಮಾತನಾಡಿ, ಸುತ್ತಲ ನೂರಾರು ಹಳ್ಳಿಯ ಜನರು, ಮಕ್ಕಳಿಗೆ ಅನಾರೋಗ್ಯ ಉಂಟಾದರೆ, ದೂರದ ತಾಲೂಕು, ಜಿಲ್ಲೆಗಳಿಗೆ ಹೋಗಬೇಕಾಗಿತ್ತು ಎಂದರು.

ಮಕ್ಕಳ ತಜ್ಞ ಚಂದನ್ ಆರ್.ಜಕ್ಕಲಿ, ಚೇತನ್ ಆರ್.ಜಕ್ಕಲಿ, ವೈದ್ಯರಾದ ಶಿವಾಜಿ, ವಿನಯ್, ಮುಖಂಡ ಮಹೇಶ್ ಪಾಟೀಲ್ ಇದ್ದರು.

ಲಾರಿಯ ಟೈರ್‌ಸ್ಫೋಟ: ಪಾದಚಾರಿ ಸಾವು

ಭದ್ರಾವತಿ: ನಗರದ ತರೀಕೆರೆ ರಸ್ತೆ ಶಿವಾನಿ ಕ್ರಾಸ್ ಸಮೀಪ ಲಾರಿಯೊಂದರ ಟೈರ್‌ಸ್ಫೋಟಗೊಂಡ ಪರಿಣಾಮ ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ಬದಿಯಲ್ಲಿ ಸಂಚರಿಸುತ್ತಿದ್ದ ಪಾದಚಾರಿಗೆ ಡಿಕ್ಕಿ ಹೊಡೆದ ಪರಿಣಾಮ ಆತ ತೀವ್ರ ಗಾಯಗೊಂಡು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವ ಘಟನೆ ನಡೆದಿದೆ. ಮೃತರನ್ನು ಇಸ್ಮಾಯಿಲ್ ಜಬಿವುಲ್ಲಾ(25) ಎಂದು ಗುರುತಿಸಲಾಗಿದೆ. ತಾಲೂಕಿನ ತಿಪ್ಲಾಪುರ ಗ್ರಾಮದ ನಿವಾಸಿಯಾಗಿದ್ದು, ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ. ಜೂನ್ 27ರಂದು ಮಧ್ಯಾಹ್ನ ಸುಮಾರು 1.30ರ ವೇಳೆಗೆ ಕೆಲಸದ ನಿಮಿತ್ತ ಶಿವಾನಿ ಕ್ರಾಸ್ ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಭಾರತ್ ಬೆಂಜ್ ಲಾರಿಯ ಹಿಂಭಾಗದ ಟೈರ್‌ಸ್ಫೋಟಗೊಂಡ ಪರಿಣಾಮ ಚಾಲಕನ ನಿಯಂತ್ರಣ ಕಳೆದು ಕೊಂಡು ಡಿಕ್ಕಿ ಹೊಡೆದಿದೆ ಎಂದು ತಿಳಿದು ಬಂದಿದೆ.

ವಿದ್ಯುತ್ ಉಪ ಘಟಕ: ಕೃತಜ್ಞತೆ

ಭದ್ರಾವತಿ: ತಾಲೂಕಿನ ಭದ್ರಾವತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮಸ್ಥರ ಬಹುವರ್ಷಗಳ ಬೇಡಿಕೆಯಾದ ಹುಣಸೇಕಟ್ಟೆ ಗ್ರಾಮದಲ್ಲಿ 2★20 ಎಂ.ವಿ.ಎ 66/11 ಕೆ.ವಿ ವಿದ್ಯುತ್ ಉಪ ಘಟಕ (ಸಬ್ ಸ್ಟೇಷನ್) ಸ್ಥಾಪಿಸಲು ಇಂಧನ ಇಲಾಖೆ ಮುಂದಾಗಿರುವುದಕ್ಕೆ ನಗರದ ಜನ್ನಾಪುರ ಡಿ. ದೇವರಾಜ ಅರಸು ಜನಸ್ಪಂದನ ಸೇವಾ ಟ್ರಸ್ಟ್ ಗ್ರಾಮಸ್ಥರ ಪರವಾಗಿ ಸಚಿವ ಕೆ.ಜೆ.ಜಾರ್ಜ್‌ರವರಿಗೆ ಕೃತಜ್ಞತೆ ಸಲ್ಲಿಸಿದೆ. ಸಚಿವರಿಗೆ ಹಾಗು ಕೆಪಿಟಿಸಿಎಲ್ ಅಧಿಕಾರಿಗಳಿಗೆ ನಗರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಆರ್. ವೇಣುಗೋಪಾಲ್ ಕೃತಜ್ಞತೆ ಸಲ್ಲಿಸಿದ್ದಾರೆ.

ಕಳೆದಿದೆ

ಶರೀಶ ಎಂ ಬಿನ್ ಮುನಿರತ್ನಂ ನಾಯ್ದು ಎ.ಎಸ್. ಭದ್ರಾವತಿ ತಾಲ್ಲೂಕು, ಆರಳಿಹಳ್ಳಿ ಅಂಚೆ, ಬಸಲೀಕಟ್ಟೆ ಗ್ರಾಮದ ವಾಸಿಯಾದ ನಾನು, **ಭದ್ರಾವತಿ ಟೌನ್ ಗಾಂಧಿನಗರದ ಸೆಂಟ್ ಜೋಸೆಫ್ ಶಾಲೆಯಲ್ಲಿ ಹತ್ತನೇ ತರಗತಿ (ಸಿ.ಬಿ.ಎಸ್.ಸಿ) ವ್ಯಾಸಂಗ ಮಾಡಿದ್ದು, ಸದರಿ ಪರೀಕ್ಷೆಯ ರಿಜಿಸ್ಟರ್ ನಂ.4090026 ಆಗಿರುತ್ತದೆ.** ಸದರಿ ಪರೀಕ್ಷೆಯಲ್ಲಿ ಪಾಸಾಗಿದ್ದು, ಸದರಿ ಅಂಕಪಟ್ಟಿಯು ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಲ್ಲಿ ಈ ಮೇಲಿನ ವಿಳಾಸಕ್ಕೆ ತಲುಪಿಸಬೇಕಾಗಿ ವಿನಂತಿ.

CHANGE OF NAME

I, **ANNAPOORNA A** W/o **BASAVARAJA H**, previously called **ANNAPURNA A** (old name), residing at Hurulihalli, Balenahalli, Tarikere Taluk, Chickmagalur District - 577228 have changed my name as **ANNAPOORNA A** W/o **BASAVARAJA H** (new name) vide affidavit dated 29-06-2026 sworn before Notary Bhavani Rao S., Shivamogga. Henceforth all my transactions & dealings will be in my new name **ANNAPOORNA A** W/o **BASAVARAJA H.**

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, **ಶ್ರೀಮತಿ ಸುಜಾತ ಕೋಂ ಸುಂದರರಾಜ್ ಮತ್ತು ಇತರರು,** ವಾಸ: ಕುವೆಂಪು ನಗರ, ತಾವರಘಟ್ಟ (ಸಿಂಗನಮನೆ) ಶಂಕರಘಟ್ಟ, ಭದ್ರಾವತಿ ತಾ. ಕಸಬಾ ಹೋಬಳಿ ಇವರುಗಳು ದಿನಾಂಕ 23/06/2026 ರಂದು SR No.4217/2026-27ರ ಮೂಲಕ ಮಾಡಿಕೊಂಡ ನೊಂದಾಯಿತ ವಿಭಾಗ ಪತ್ರ ದನ್ವಯ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಒಡೆತನ ಪಡೆದ ಶ್ರೀಮತಿ ಸುಜಾತ ಕೋಂ ಸುಂದರ ರಾಜ್ ಅವರು ಸದರಿ ಸ್ವತ್ತಿನ ಮೇಲೆ ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್, ಶಿವಮೊಗ್ಗ ಇವರಿಂದ ಸಾಲ ಪಡೆಯಬಯಸಿದ್ದಾರೆ.

ಸದರಿ ಷೆಡ್ಯೂಲ್ ಸ್ವತ್ತಿನ ಹಕ್ಕುದಾರಿಕೆ, ಭೋಗ್ಯ, ಆಧಾರ ಸಾಲ ಅಥವಾ ಇನ್ನಾವುದೇ ರೀತಿಯ ತಕರಾರು ಹೊಂದಿರುವ ಯಾವುದೇ ವ್ಯಕ್ತಿ, ಬ್ಯಾಂಕ್, ಹಣಕಾಸು ಸಂಸ್ಥೆಯವರು ಈ ಕೆಳಕಂಡವರಿಗೆ 7 ದಿನದೊಳಗೆ ಸೂಕ್ತ ದಾಖಲೆಗಳೊಂದಿಗೆ ಲಿಖಿತ ರೂಪದಲ್ಲಿ ತಕರಾರು ಸಲ್ಲಿಸತಕ್ಕದ್ದು. ಒಂದು ವೇಳೆ ನಿಗದಿತ ಸಮಯದಲ್ಲಿ ಯಾವುದೇ ತಕರಾರು ಸಲ್ಲಿಕೆಯಾಗದಿದ್ದಲ್ಲಿ ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿ.ನವರು ಸಾಲ ಮಂಜೂರಾತಿ ಪ್ರಕ್ರಿಯೆ ಮುಂದವರಿಸಲಿದ್ದು, ನಂತರದ ಯಾವುದೇ ಆಕ್ಷೇಪಣೆಯನ್ನು ಪುರಸ್ಕರಿಸುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ:

ಖಾಲಿ ನಿವೇಶನದ ಖಾತೆ ನಂ. 142, PID No.152400103700100730 ವಿಸ್ತೀರ್ಣ 9.144 x 12.192 111.48 ಚ.ಮೀ ಇ-ಸ್ವತ್ತಿನ ಪ್ರಕಾರ ಸ್ವತ್ತಿನ ಸ್ಥಳ ಭದ್ರಾವತಿ ತಾ., ಕಸಬಾ ಹೋಬಳಿ, ಸಿಂಗನಮನೆ ಗ್ರಾ.ಪಂ. ವ್ಯಾಪ್ತಿ. ಇದಕ್ಕೆ ಚಕ್ಕುಬಂಧಿ: ಪೂರ್ವ-ಸೈಟ್ ನಂ.141, ಪಶ್ಚಿಮ-ಸೈಟ್ ನಂ.143, ಉತ್ತರ-ರಸ್ತೆ, ದಕ್ಷಿಣ-ಸೈಟ್ ನಂ.154.

ಸಹಿ/- **ಶೈಲಜಾ ಪರಮೇಶ್,** ವಕೀಲರು
ಮೊ: 9886671423, Email Id: shailajaf50@gmail.com

MANAPPURAM FINANCE LTD.
CIN : L65910KL1992PLC006623
Registered Office : W - 4/ 638A, Manappuram House, P.O. Valapad, Thrissur - 680 567, Kerala, India

ಹರಾಜು ಪ್ರಕಟಣೆ

ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/07/2026 **ರಂದು ಬೆಳಿಗ್ಗೆ** 10.00 **ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 85%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ ('ನಲ್ಲಿ) ಐಟಂ ಹೆಸರಿನ ಕ್ರಮದಲ್ಲಿದೆ**

ಅಡವುಗಳ ಪಟ್ಟಿ :

ದಾವಣಗೆರೆ, ಅಂಬೇಡ್ಕರ್ ಸರ್ಕಲ್ ದಾವಣಗೆರೆ, 4541, ಮಲ್ಲಿಕಾರ್ಜುನ ಎಂ, 33700/-, ಡ್ರಾಪ್ಸ್ & ಸ್ಟಡ್ 1, 0125060700034545, ಮಹಮ್ಮದ್ ಸುಹೇಲ್, 44588/-, ಡ್ರಾಪ್ಸ್ & ಸ್ಟಡ್ 1,ಚೈನ್ 1, 0125060700034622, ಗೌಸ್ ಪೀರ್, 33800/-, ಲಾಕೆಟ್ 1, ಶಿವಮೊಗ್ಗ , ಬಿ ಹೆಚ್ ರೋಡ್ ಭದ್ರಾವತಿ, 7252, ನಾಜಿಯಾ ಅಂಜುಮ್, 313229/-, ಲಾಕೆಟ್ 1,ಸ್ಟಡ್ 1,ಡ್ರಾಪ್ಸ್ & ಸ್ಟಡ್ 1, ಬಿ ಹೆಚ್ ರೋಡ್ ಶಿವಮೊಗ್ಗ, 9276, ಫೈರುಲ್, 21045/-, ಉ-ಡ್ರಾಪ್ಸ್ & ಸ್ಟಡ್ 1, ಚಿತ್ರದುರ್ಗ, ಚಳ್ಳಕೆರೆ ಬಸ್ ಸ್ಟ್ಯಾಂಡ್, 8733, ತಿಪ್ಪೇಶ್ವಾಮಿ ಜಿಬಿ, 95083/-, ಚೈನ್ 1, 0134120730018734, ತಿಪ್ಪೇಶ್ವಾಮಿ ಜಿಬಿ, 92221/-, ಫಿಂಗರ್ ರಿಂಗ್ಸ್ 1, ದಾವಣಗೆರೆ, ಚನ್ನಗಿರಿ, 3288, ಮಂಜುನಾಥ.ಆರ್., 25000/-, ಡ್ರಾಪ್ಸ್ & ಸ್ಟಡ್ 1, 9500, ಆರ್ ತಿಪ್ಪೇಶ, 56342/-, ಡ್ರಾಪ್ಸ್ & ಸ್ಟಡ್ 1, ಚಿತ್ರದುರ್ಗ, ಚಳ್ಳಕೆರೆ, 0280, ಡಿ ಶಶಿಕುಮಾರ್, 64000/-, ಚೈನ್ 1, ಚಿಕ್ಕಮಗಳೂರು, ಚಿಕ್ಕಮಗಳೂರು, 4079, ಭಾರತಿ, 18700/-, ಸ್ಟಡ್ 1, 0122520700044087, ರಮೇಶ್. ಎಸ್., 56000/-, ನೆಕ್ ಲೇಸ್ 1, ಚಿತ್ರದುರ್ಗ, ಚಿತ್ರದುರ್ಗ, 4118, ಟಿ ನವೀನ , 16091/-, ಫಿಂಗರ್ ರಿಂಗ್ಸ್ 1, 0102480730034653, ಬಷೀರ್ ಉನ್ನಿಸ್ಸ, 55743/-, ನೆಕ್ ಲೇಸ್ 1, 0102480730037487, ವಿನಯ್. ಎಮ್, 117002/-, ಚೈನ್ 1, 0102480730037568, ಮಾರುತಿ ವಿ ಜಿ , 80002/-, ಚೈನ್ 1, ಚಿತ್ರದುರ್ಗ ಬಿ ಡಿ ರೋಡು, 5268, ಮಹಂತೇಶ ಎಚ್, 24071/-, ಡ್ರಾಪ್ಸ್ & ಸ್ಟಡ್ 1, ದಾವಣಗೆರೆ, ದೊಡ್ಡಪೇಟೆ ದಾವಣಗೆರೆ, 1624, ಸುಸ್ಮಿತಾ ಎಂ, 46926/-, ಚೈನ್ 1, ಚಿತ್ರದುರ್ಗ, ಹಿರಿಯೂರು ಸರ್ಕಲ್ ಹೊಸದುರ್ಗ, 4667, ಮಂಜುನಾಥ ಡಿ ಬಿ, 9000/-, ಫಿಂಗರ್ ರಿಂಗ್ಸ್ 1, 8727, ಮಹಾಂತೇಶ್ ಆರ್, 24001/-, ಫಿಂಗರ್ ರಿಂಗ್ಸ್ 1, ಹಿರಿಯೂರು , 5398, ಗಿರೀಶ.ಸಿ., 26902/-, ಡ್ರಾಪ್ಸ್ & ಸ್ಟಡ್ 1, ಹಿರಿಯೂರು ಮೇನ್ ರೋಡು, 6098, ಪುರ್ಯಾ ನಾಯ್ಕ, 70410/-, ಡ್ರಾಪ್ಸ್ & ಸ್ಟಡ್ 1, 0102690730056222, ಸಿದ್ದೇಶ ಬಿ, 23810/-, ಡ್ರಾಪ್ಸ್ & ಸ್ಟಡ್ 1, 0102690730056458, ಭಾರತ್ ಎಂ ಬಿ, 274420/-, ಚೈನ್ 1, 0102690730056702, ಶಾಂತಿ ಎಸ್, 183990/-, ಫಿಂಗರ್ ರಿಂಗ್ಸ್ 1,ಡ್ರಾಪ್ಸ್ & ಸ್ಟಡ್ 1,ಚೈನ್ 1, ಚಿತ್ರದುರ್ಗ, ಹೊಳಲ್ಕೆರೆ, ಚಿತ್ರದುರ್ಗ, 1834, ನವೀನ್. ಸಿ.ಆರ್., 21600/-, ಫಿಂಗರ್ ರಿಂಗ್ಸ್ 1, 8227, ನಾಗರಾಜಪ್ಪ, 164525/-, ಚೈನ್ 1, 0135880730038302, ಪ್ರಕಾಶ್, 92778/-, ಮಟ್ಟಿ 1,ಡ್ರಾಪ್ಸ್ & ಸ್ಟಡ್ 1, ಶಿವಮೊಗ್ಗ , ಹೊಸನಗರ, 9601, ಸಂದೇಶ್ ಕೆ, 25912/-, ಲಾಕೆಟ್ 1,ಸ್ಟಡ್ 1, ಚಿಕ್ಕಮಗಳೂರು, ಕಡೂರು ಬಿ ಎಚ್ ರಸ್ತೆ, 2864, ಗೋಪಿನಾಥ ಕೆ ಆರ್, 46048/-, ಚೈನ್ 1, ಚಿತ್ರದುರ್ಗ, ಎಲ್‌ಐಸಿ ರೋಡು ಚಳ್ಳಕೆರೆ, 3027, ಶಶಿ ಕುಮಾರ್. ಪಿ., 27900/-, ಡ್ರಾಪ್ಸ್ & ಸ್ಟಡ್ 1, 0102990700075318, ಬಸವರಾಜ್ ಎಸ್ , 20000/-, ಡ್ರಾಪ್ಸ್ & ಸ್ಟಡ್ 1, ಚಿಕ್ಕಮಗಳೂರು, ಎಮ್.ಜಿ ರೋಡ್ ಚಿಕ್ಕಮಗಳೂರು, 1040, ಮಹೇಂದ್ರ ಎಚ್ ಎಂ, 11488/-, ಡ್ರಾಪ್ಸ್ & ಸ್ಟಡ್ 1, ಚಿತ್ರದುರ್ಗ, ಎಮ್ ಹೆಚ್ ರೋಡು, ಚಿತ್ರದುರ್ಗ, 7542, ಪ್ರವೀಣ್ ಕುಮಾರ್ ಎಂ, 29000/-, ಡ್ರಾಪ್ಸ್ & ಸ್ಟಡ್ 1, 0110910700037562, ಪ್ರವೀಣ್ ಕುಮಾರ್ ಎಂ, 30000/-, ಚೈನ್ 1, 7081, ಪ್ರವೀಣ್ ಕುಮಾರ್ ಎಂ, 32120/-, ಫಿಂಗರ್ ರಿಂಗ್ಸ್ 1, 0110910730027096, ಜಿ ಸಿ ಸುಬ್ರಮಣ್ಯ, 29608/-, ಡ್ರಾಪ್ಸ್ & ಸ್ಟಡ್ 1, ಚಿಕ್ಕಮಗಳೂರು, ಎನ್ ಆರ್ ಪುರ, 8482, ರೇವತಿ ವಿ ಜಿ, 6000/-, ಫಿಂಗರ್ ರಿಂಗ್ಸ್ 1, 0111280700038527, ನಾಗರಾಜ ಬಿ ಎಸ್, 18998/-, ಫಿಂಗರ್ ರಿಂಗ್ಸ್ 1, ಶಿವಮೊಗ್ಗ , ಎನ್ ಟಿ ರೋಡು, 3422, ಕುಮಾರ್ , 19000/-, ಫಿಂಗರ್ ರಿಂಗ್ಸ್ 1, ದಾವಣಗೆರೆ, ಓಲ್ಡ್ ಪಿ ಬಿ ರೋಡ್ ಹರಿಹರ, 6821, ಹನುಮಪ್ಪ, 9514/-, ಇಯರ್ ರಿಂಗ್ಸ್ 1, ಶಿವಮೊಗ್ಗ , ಪಾರ್ಕ ಎಕ್ಸಟೆನ್ಷನ್, ಶಿವಮೊಗ್ಗ, 1269, ಚಿದಾನಂದ ಕೆ ಎಂ, 56000/-, ಫಿಂಗರ್ ರಿಂಗ್ಸ್ 1,ಡ್ರಾಪ್ಸ್ & ಸ್ಟಡ್ 1, 3066, ಚಿದಾನಂದ ಕೆ ಎಂ, 110040/-, ಡ್ರಾಪ್ಸ್ & ಸ್ಟಡ್ 1, ಶಿವಮೊಗ್ಗ , ಸಾಗರ, 6523, ಎಚ್ ಆರ್ ಆದಿತ್ಯ, 14700/-, ಫಿಂಗರ್ ರಿಂಗ್ಸ್ 1, 0103490700066529, ಸಿ ಮಂಜುನಾಥ, 14252/-, ಸ್ಟಡ್ 1, ಶಿವಮೊಗ್ಗ , ಶಿರಾಳಕೊಪ್ಪ, 0199, ಶಶಿಕುಮಾರ್ ಪಿ, 11500/-, ಫಿಂಗರ್ ರಿಂಗ್ಸ್ 1, 7764, ಎಂ ಗುಡ್ಡಪ್ಪ, 46027/-, ಚೈನ್ 1, ಚಿಕ್ಕಮಗಳೂರು, ತರೀಕೆರೆ ಧರ್ಮಲಿಂಗ ರೋಡ್, 2182, ಸುಜನ್ ಟಿ ಡಿ, 45007/-, ಫಿಂಗರ್ ರಿಂಗ್ಸ್ 2, 0102840730012198, ಚಂದ್ರಶೇಕರ್ ಆರ್, 54926/-, ಸ್ಟಡ್ 1, ಚಿಕ್ಕಮಗಳೂರು, ಟಿಬಿ ರೋಡು ಕಡೂರು, 3007, ಪರಮೇಶ್ವರಪ್ಪ, 14520/-, ಡ್ರಾಪ್ಸ್ 1, 3050, ಹರ್ಷಿತಾ ಎಸ್.ಎಂ., 46068/-, ಫಿಂಗರ್ ರಿಂಗ್ಸ್ 1,ಡ್ರಾಪ್ಸ್ & ಸ್ಟಡ್ 1, ಶಿವಮೊಗ್ಗ , ತೀರ್ಥಹಳ್ಳಿ ಶಿವಮೊಗ್ಗ, 6864, ಆಕರ್ಷ್ ಎಸ್ ವಿ, 29507/-, ಫಿಂಗರ್ ರಿಂಗ್ಸ್ 1, 0132870730016996, ಪ್ರಕಾಶ್ ಬಿ ಎಸ್, 21025/-, ಫಿಂಗರ್ ರಿಂಗ್ಸ್ 2, 0132870730017067, ವರದ್ರಾಜ್, 10990/-, ಫಿಂಗರ್ ರಿಂಗ್ಸ್ 1, 0132870730017102, ಸಾಯದ ಅಲ್ ಅಹೇಕಸನದಿ, 39507/-, ಡ್ರಾಪ್ಸ್ & ಸ್ಟಡ್ 2, ಶಿವಮೊಗ್ಗ , ವಿನೋಬ ನಗರ, 6672, ವಿನಾಯಕ ಕೆ.ಎಲ್., 21500/-, ಸ್ಟಡ್ 1, 0122080700036703, ಮಂಜು ಎ ಕೆ, 17900/-, ಫಿಂಗರ್ ರಿಂಗ್ಸ್ 1,

ಮೇಲಿನ ಹರಾಜಿನಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿಗಳು ಈ ಮುಂದೆ ತಿಳಿಸಿರುವುದನ್ನು ಅನುಸರಿಸತಕ್ಕದ್ದು:- ಆಸಕ್ತಿಯುಳ್ಳ ಸವಾಲು ಕೂಗುವವರು (ಬಿಡ್ಡರ್ ಗಳು) ಎನ್‌ಇಎಫ್ ಟಿ/ಆರ್ ಟಿಜಿಎಸ್ ವಿಧಾನದ ಮೂಲಕ ರೂ. 10,000/ **ಅನ್ನು ಇಎಂಡಿ (ವಿಫಲಗೊಂಡ ಸವಾಲು ಕೂಗುವವರಿಗೆ ಮರುಪಾವತಿಯಾಗುವಂಥದ್ದು) ಆಗಿ ಹರಾಜಿನ ದಿನದಂದೇ ಸಲ್ಲಿಸಬೇಕು. ಸವಾಲು ಕೂಗುವವರು ಮಾನ್ಯವಾದ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಇಟ್ಟುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು** 9072607147 **ಅನ್ನು ಸಂಪರ್ಕಿಸಿ.**

ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಲಿ. ಪರವಾಗಿ

ಶಿಕ್ಷಣ-ಸಾಮಾಜಿಕ ವಲಯದಲ್ಲಿ ಛಾಪು ಮೂಡಿಸಿರುವ ಮಹಿಳಾ ಸಾಧಕಿ ಪೂಜಾ ಸಜೇಶ್

• **ಟಿ.ಎನ್. ಮಂಜುನಾಥ್, ವಿರಾಜಪೇಟೆ**

ಕೊಡಗು ಜಿಲ್ಲೆಯ ವಿರಾಜಪೇಟೆಯ ಪೂಜಾ ಸಜೇಶ್ ಶಿಕ್ಷಣ ಹಾಗೂ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಮಾದರಿ ಮಹಿಳಾ ಸಾಧಕಿಯಾಗಿದ್ದು, ಪ್ರತಿಷ್ಠಿತ ಕನ್ನಡಪ್ರಭ-ಏಷ್ಯಾನೆಟ್ ಸುವರ್ಣನ್ಯೂಸ್ ನಿಂದ ಸುವರ್ಣ ಕನ್ನಡಿಗ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪೂಜಾ ಅವರು, ವಿರಾಜಪೇಟೆ ಲಿಟಲ್ ಸ್ಕಾಲರ್ಸ್ ಅಕಾಡೆಮಿಯ ಅಧ್ಯಕ್ಷರು, ಗೋಲ್ಡನ್ ಬೀನ್ಸ್ ಲಕ್ಸುರಿ ಹೋಂ ಸ್ಟೇಂನ ಎಂಡಿ ಹಾಗೂ ಎಂಪವರಿಂಗ್ ವುಮೆನ್ ಎನ್ ಜಿ ಒ ಸಂಸ್ಥೆಯ ಫೌಂಡರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಸಹಾಯ ಹಸ್ತ ನೀಡುವ ಮೂಲಕ ಜನ ಮೆಚ್ಚುಗೆ ಗಳಿಸಿದ್ದಾರೆ. ಹೆಗ್ಗಳ ಸರ್ಕಾರಿ ಶಾಲೆಗೆ ಮುಖ್ಯದ್ವಾರ ನಿರ್ಮಾಣ, ರಾಮನಗರ ಶಾಲೆಗೆ ಅಗತ್ಯವಾದ ತಡೆಗೋಡೆ ಕಟ್ಟಿಸಿಕೊಟ್ಟಿದ್ದಾರೆ. ಅಮ್ಮತ್ತಿ ಸರ್ಕಾರಿ ಶಾಲೆಗೆ ಅಗತ್ಯವಾದ ಪ್ರಿಂಟರ್ ಒದಗಿಸಿದ್ದಾರೆ.

ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಟ್ರ್ಯಾಕ್ ಸೂಟ್, ಟೀ ಶರ್ಟ್ ನೀಡುತ್ತಿದ್ದಾರೆ. 300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡುತ್ತಿದ್ದಾರೆ. ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಪೂಜಾ ಅವರು, ಎಷ್ಟೋ ಬಡ ಕುಟುಂಬದ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆಯುವಲ್ಲಿ ಸಹಾಯಕರಾಗಿದ್ದಾರೆ.

ವಿರಾಜಪೇಟೆ ಸಮೀಪದ ಹೆಗ್ಗಳ ಗ್ರಾಮದಲ್ಲಿರುವ ವೃದ್ಧಾಶ್ರಮಕ್ಕೆ ಅಗತ್ಯವಾದ ಪರಿಕರ ಪೂರೈಸಿದ್ದಾರೆ. ಇಲ್ಲಿಗೆ ಭೇಟಿ ನೀಡಿ ಪ್ರತಿಯೊಬ್ಬ ವೃದ್ಧರ ಆರೋಗ್ಯ ಕ್ಷೇಮವನ್ನು ವಿಚಾರಿಸುವ ಮೂಲಕ, ವೃದ್ಧರಿಗೆ ತಮ್ಮದೇ ಮಗಳು ಹಾರೈಕೆ ನೀಡುತ್ತಿದ್ದಾಳೆಂಬ ಭಾವನೆ ಮೂಡಿಸಿ ಅವರಿಗೆ ಪೂಜಾ ಅವರು ಅಭಯ ತುಂಬಿದ್ದಾರೆ.

ಬಡ ವಿದ್ಯಾರ್ಥಿಗಳಿಗೆ ನೆರವು ನೀಡುತ್ತಾ ಬಂದಿರುವ ಪೂಜಾ, ಅಗತ್ಯ ಇರುವವರ ಉನ್ನತ ವಿದ್ಯಾಭ್ಯಾಸಕ್ಕೂ ನೆರವು ನೀಡುತ್ತಾ ಬಂದಿದ್ದಾರೆ. ಇವರ ನೆರವಿನಿಂದ ಶಿಕ್ಷಣ ಪಡೆದ ವಿದಾರ್ಥಿಗಳು ಉದ್ಯೋಗವನ್ನು ಕೂಡ ಪಡೆದುಕೊಂಡಿದ್ದಾರೆ. ಆಸ್ಪತ್ರೆ ಸಹಯೋಗದಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿದ್ದಾರೆ. ಕೋವಿಡ್ ಹಾಗೂ ಪ್ರಕೃತಿ ವಿಕೋಪ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿದ ಕುಟುಂಬಗಳಿಗೆ ಅಗತ್ಯ ವಸ್ತುಗಳ ಕಿಟ್ ನೀಡುವುದರ ಮೂಲಕ ಮಾನವೀಯತೆ ಮೆರೆದಿದ್ದಾರೆ.

ವಿರಾಜಪೇಟೆಯಲ್ಲಿ ಲಿಟ್ಲ್ ಸ್ಕಾಲರ್ಸ್ ಅಕಾಡೆಮಿ ಸ್ಥಾಪಿಸಿ ಕಡಿಮೆ ಶುಲ್ಕದಲ್ಲಿ ಉತ್ತಮ ಶಿಕ್ಷಣ ನೀಡುತ್ತಿದ್ದಾರೆ. ಎಲ್ಲಾ ವಿಷಯಗಳ ಬೋಧನೆಯನ್ನು ಚಟುವಟಿಕೆ ಆಧಾರದಲ್ಲಿ ಕಲಿಸುವ ಈ ಶಿಕ್ಷಣ ಸಂಸ್ಥೆ ವಿದ್ಯಾರ್ಥಿ, ಪೋಷಕರನ್ನು ಆಕರ್ಷಿಸುತ್ತಿದೆ. ವಿರಾಜಪೇಟೆಯ ನಾಂಗಾಲದಲ್ಲಿ 2.5 ಎಕರೆ ಪ್ರದೇಶದಲ್ಲಿ ಅತ್ಯಾಧುನಿಕ ಸುಸಜ್ಜಿತ ಶಾಲೆ ನಿರ್ಮಾಣವಾಗುತ್ತಿದ್ದು, ಲೋಕಾರ್ಪಣೆಗೆ ಸಿದ್ಧಗೊಂಡಿದೆ. ಟರ್ಫ್ ಮೈದಾನ, ಈಜುಕೊಳ ಸೇರಿದಂತೆ ಹಲವು ಸೌಲಭ್ಯಗಳು ಇರಲಿದೆ.

ತಮ್ಮದೆ ಶಿಕ್ಷಣ ಸಂಸ್ಥೆ ಇದ್ದರೂ ತಮ್ಮೂರು ಹೆಗ್ಗಳದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅಭಿವೃದ್ಧಿಗೂ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ ಪೂಜಾ ಸಜೇಶ್. ವಿದ್ಯಾರ್ಥಿಗಳೇ ಇಲ್ಲದೆ ಈ ಶಾಲೆ ಮುಚ್ಚಿಹೋಗುತ್ತದೆ ಎನ್ನುವ ಪರಿಸ್ಥಿತಿ ಎದುರಾದಾಗ ಆ ಶಾಲೆಗೆ ಅಂದ ಚಂದವಾಗಿ ಸುಣ್ಣಬಣ್ಣ ಬಳಿಸಿ, ಶಾಲೆಗೆ ಕಂಪ್ಯೂಟರ್ ವ್ಯವಸ್ಥೆ ಕಲ್ಪಿಸಿ ಅದಕ್ಕೊಂದು ಇನೋವೇಟರ್ ಕೂಡ ಕೊಡಿಸಿದ್ದಾರೆ. ಹೀಗೆ ಶಾಲೆಗೆ ಮೂಲಭೂತ ಸೌಲಭ್ಯ ಕಲ್ಪಿಸಿದ ಬಳಿಕ ಶಾಲೆಯಲ್ಲಿ ಇದೀಗ 25 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಇವರ ಅರ್ಥದಲ್ಲಿ ಸಮಾಜದಲ್ಲಿ ಆಗುತ್ತಿರುವ ಅನ್ಯಾಯ, ಅನಾಚಾರಗಳ ತಡೆಗಟ್ಟಲು ಶಿಕ್ಷಣವೇ ಆಧಾರ. ಹೀಗಾಗಿ ಶಿಕ್ಷಣ ಎಲ್ಲರಿಗೂ ಸಿಗಬೇಕು ಎಂಬುದೇ ಪೂಜಾ ಸಜೇಶ್ ಅವರ ಆಶಯ.

ಈ ಬಾರಿ ತಮ್ಮ ಶಾಲೆಯಲ್ಲಿ ಆರ್ಥಿಕವಾಗಿ ಹಿಂದುಳಿದ ಒಂದು ಬಾಲಕಿಗೆ ಉಚಿತ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿದ್ದಾರೆ. ವಿರಾಜಪೇಟೆಯಿಂದ ಹೆಗ್ಗಳ ಗ್ರಾಮಕ್ಕೆ ಉಚಿತ ಆಂಬ್ಯುಲೆನ್ಸ್ ಸೇವೆ ನೀಡುವ ಯೋಜನೆ ಹಾಕಿಕೊಂಡಿದ್ದಾರೆ.

ಎಂಪವರಿಂಗ್ ವುಮೆನ್

ಶಿಕ್ಷಣ ಅಷ್ಟೇ ಅಲ್ಲ, ಸಾಮಾಜಿಕ ಸೇವೆಯಲ್ಲಿ ಇವರು ತಮ್ಮನ್ನು ತಾವು ಸಾಕಷ್ಟು ತೊಡಗಿಸಿಕೊಂಡಿದ್ದಾರೆ. ಮಹಿಳಾ ಸ್ವಸಹಾಯ ಸಂಘಗಳಿಗೆ ತಮ್ಮದೇ ರೀತಿಯಲ್ಲಿ ಸಹಾಯ ಮಾಡುವುದು ಇವರ ಪ್ರವೃತ್ತಿ. ಸ್ವತಃ ಎಂಪವರಿಂಗ್ ವುಮೆನ್ ಎಂಬ ಎನ್‌ಜಿಒ ಕಟ್ಟಿದ್ದರೂ ಎಲ್ಲಾ ಮಹಿಳಾ ಸ್ವಸಹಾಯ ಸಂಘಗಳಿಗೆ ಸಹಾಯ ಮಾಡುತ್ತಾ, ಅವುಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಮಹಿಳಾ ಸಬಲೀಕರಣಕ್ಕೆ ತಮ್ಮ ವಿಚಾರಧಾರೆ ನೀಡುತ್ತಿದ್ದಾರೆ.